ಅಕ್ಕ ತನ್ನ ಮೂವರು ಹೆಣ್ಣುಮಕ್ಕಳನ್ನು ಬಿಟ್ಟು ತೀರಿಕೊಂಡಿದ್ದಾಳೆ. ಅವರನ್ನು ಇವರೇ ಸಾಕುತ್ತಿದ್ದಾರೆ. ಮಸಿಯಮ್ಮ, "ನಾನು ಪಟ್ಟಿರೋ ಕಷ್ಟನೆಲ್ಲಾ ಒಂದು ಕಲ್ಲಿನ ಮುಂದೆ ಹೇಳಿದರೆ, ಆ ಕಲ್ಲೂ ಕರಗಿಹೋಗುತ್ತದೆ... ಬೆಳಗಿನ ಹೊತ್ತು ಹಟ್ಟಿಯ ಮನೆಗಳವರು ಪಾತ್ರೆ- ಪಗಡಿಗಳನ್ನು ಬೆಳಗಲೆಂದು ಹೊರಗಡೆ ಇಡುತ್ತಿದ್ದರು. ನಮ್ಮ ಕಣ್ಣುಗಳು ಮಾತ್ರ ಹಿಟ್ಟಿನ ಮಡಕೆಗಳನ್ನೇ ಹುಡುಕುತ್ತಿದ್ದವು. ಏಕೆಂದರೆ ಅದರ ತಳದಲ್ಲಿರುವ ಸೀಕಾದರೂ ಸಿಗುತ್ತದೆ ಎಂಬ ಆಸೆಯಿಂದ. ಪಾತ್ರೆಗಳನ್ನು ಬೆಳಗಲು ಅವರು ಕರೆಯದಿದ್ದರೂ ನಾವೇ ಅವುಗಳನ್ನೆಲ್ಲಾ ತೊಳೆದು ಬೆಳಗಿ, ಅದರಲ್ಲಿರುವ ಸೀಕನ್ನು ಎಬ್ಬಿಕೊಂಡು ತಿನ್ನುತ್ತಿದ್ದೆವು... ಯಾರಾದರೂ ಹಣ್ಣು ತಿಂದು ಸಿಪ್ಪೆ ಬಿಸಾಕಿದ್ದರೆ, ಎಷ್ಟೋ ಸಲ ಆ ಸಿಪ್ಪೆಯನ್ನೂ ತಿಂದಿದ್ದೇನೆ" ಎಂಬ ಮಾತುಗಳು ಇಲ್ಲಿವೆ.

ಮಸಿಯಮ್ಮನವರ ಇನ್ನೊಂದು ಮಾತು ಹೀಗಿದೆ: "...ಆದರೂ ನಾನು ಎಂದೂ ನಿರಾಸೆಯಿಂದ ಇದ್ದವಳಲ್ಲ! ಈ ಬದುಕು ಸಾಕು ಅಂಥ ನನಗೆ ಯಾವತ್ತೂ ಅನಿಸಿಲ್ಲ. ನಮ್ಮ ಗಿಡದಾಗೆ ಯಾವತ್ತಿದ್ದರೂ ಹೂ ಬಿಡುತ್ತೈದೆ ಅನ್ನೋದು ಗೊತ್ತು" ಇಂಥ ಅನುಪಮ ಆತ್ಮಸ್ಥೈರ್ಯವುಳ್ಳ ಮಸಿಯಮ್ಮನವರು ಹಟ್ಟಿಯ ದಲಿತ ಸಂಘ ಸೇರುತ್ತಾರೆ. ಎಲ್ಲ ಹೋರಾಟಗಳಲ್ಲಿ ಭಾಗವಹಿಸುತ್ತಾರೆ. ಹಟ್ಟಿಯ ಹೆಂಗಸರಿಗೆ ಸ್ಫೂರ್ತಿ ಮತ್ತು ಮಾದರಿಯಾಗುತ್ತಾರೆ. ಬಿ. ಕೃಷ್ಣಪ್ಪನವರ ಜೊತೆ ಚಂದ್ರಗುತ್ತಿಗೆ ಹೋಗಿ ಬೆತ್ತಲೆ ಸೇವೆ ವಿರುದ್ಧ ಚಳವಳಿಯಲ್ಲಿ ಭಾಗಿಯಾಗುತ್ತಾರೆ. '...ನನ್ನ ಪಾಲಿಗೆ ಈಗಲೂ ದಲಿತ ಸಂಘವೆಂದರೆ ನನ್ನ ತಾಯಿಯ ನೆನಪಾಗುತ್ತದೆ. ಅವಳು ಬದುಕಿದ್ದರೆ ಅವಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದೆ. ಆದರೆ, ಈಗ ಅವಳಿಲ್ಲ' ಎನ್ನುವ ಮಸಿಯಮ್ಮನವರು ಈಗಲೂ ಹೋರಾಟವನ್ನೇ ತಮ್ಮ ತಾಯಿ ಕೊಟ್ಟ ಉಸಿರೆಂಬಂತೆ ತಿಳಿದು ಜೀವಿಸುತ್ತಿದ್ದಾರೆ.

ಮಸಿಯಮ್ಮನವರ ಜೀವನ ವೃತ್ತಾಂತವನ್ನು ವಿಸ್ತೃತವಾಗಿಯೇ ಇಲ್ಲಿ ಹೇಳಿದ್ದೇನೆ. ಇದು ಒಬ್ಬರ ಪ್ರಾತಿನಿಧಿಕ ಧ್ವನಿಯಷ್ಟೇ. ಈ ಕೃತಿಯಲ್ಲಿ ಇನ್ನೂ ಎಷ್ಟೊಂದು ಧ್ವನಿಗಳಿದ್ದಾವೆ. ಏಕವ್ಯಕ್ತಿ ಕೇಂದ್ರಿತ ಆತ್ಮಕಥೆಗಳಿಗಿಂತೂ ಒಂದು ಸಮುದಾಯವೇ ತನ್ನನ್ನು ತೆರೆದಿಟ್ಟುಕೊಳ್ಳುವುದರಲ್ಲಿ ಒಂದು ಭಿನ್ನ ಸೌಂದರ್ಯವಿರುತ್ತದೆ. ಹಲವು ಬದುಕುಗಳು ಅನಾವರಣಗೊಳ್ಳುತ್ತವೆ. ಅಂಥ ಅನುಭವವೊಂದನ್ನು ದೊರೈರಾಜ್ ಒದಗಿಸಿಕೊಟ್ಟಿದ್ದಾರೆ.

ನನ್ನ ಈ ಲೇಖನ ಓದುವವರಿಗೆ ಈ ಹಟ್ಟಿಯಲ್ಲಿ ಎಲ್ಲ ಸರಿಯಾಗಿದೆ, ಒಗ್ಗಟ್ಟಿನ ಹೋರಾಟ ಎಂಬ ಭಾವನೆ ಮೂಡಬಹುದು. ಎಲ್ಲ ಕಡೆ ಇರುವಂತೆಯೇ ಇಲ್ಲೂ ಭಿನ್ನ ವಿಚಾರಗಳು, ಗುಂಪುಗಳು, ಈರ್ಷ್ಯೆ, ಒಳ ರಾಜಕಾರಣ ಇದ್ದಾಗಲೂ ಅವುಗಳನ್ನು ಎದುರಿಸಿ ಸಮುದಾಯದ ಕ್ಷೇಮವನ್ನು ಕಾಪಾಡುವುದು ಕಷ್ಟದ ಕೆಲಸ. ಸುಮಾರು ಆರು ಸಾವಿರ ಜನಸಂಖ್ಯೆಯಿರುವ ಈ ಹಟ್ಟಿ ಅನೇಕ ದೃಷ್ಟಿಗಳಿಂದ ಒಂದು ವೋಟ್ ಬ್ಯಾಂಕ್ ಕೂಡ ಆಗಿದೆ ಎಂಬುದನ್ನು ಮರೆಯಬಾರದು. ಆ ಕಾರಣದಿಂದಾಗಿ ಸಾಂಸ್ಕೃತಿಕ ಮತ್ತು ರಾಜಕೀಯ ಮೇಲಾಟಗಳು, ಚಕಮಕಿಗಳು ಇದ್ದೇ ಇರುತ್ತವೆ. ಈಚೆಗೆ ಬೂದಿಮುಚ್ಚಿದ ಕೆಂಡದಂತಿದ್ದ ಎಡ-ಬಲ ರಾಜಕಾರಣ ಎದ್ದುಕಾಣುತ್ತಿದೆ. ಇದೆಲ್ಲದರ ನಡುವೆಯೂ 'ಒಂದು ಹಟ್ಟಿಯ ಆತ್ಮಕಥಾನಕ' ಕರ್ನಾಟಕದ ದಲಿತ ಚಳವಳಿಯ ಒಂದು ಮಾದರಿ ಹೋರಾಟವೆಂಬುದನ್ನು ಸಾಬೀತು ಪಡಿಸುತ್ತದೆ.

ಆತ್ಮಕಥನವೆಂದರೆ ವ್ಯಕ್ತಿಯೊಬ್ಬ ತನ್ನ ನೆನಪಿನ ಗಣಿಯನ್ನು ಉತ್ಖನನ ಮಾಡುವುದು. ಅಂತೆಯೇ ಒಂದು ನಾಗರಿಕತೆಯನ್ನು ಅರಿಯಲು ಹಲವು ಜನರು ಸೇರಿ ಉತ್ಖನನಗಳ ಮೂಲಕ ಕಟ್ಟಿಕೊಡಬೇಕಾಗುತ್ತದೆ. ಉತ್ಖನನ ಮಾಡುವಾಗ ಹಲವಾರು ವಸ್ತುಗಳು ದೊರೆತು, ಅವುಗಳ ಅಧ್ಯಯನ ಮಾಡಲಾಗುತ್ತದೆ. ಹಾಗೆ ಉತ್ಖನನ ಮಾಡುವಾಗ ಸಾಮಾನ್ಯವಾಗಿ ಇಟ್ಟಿಗೆಗಳು, ಹೆಂಚಿನ ತುಣುಕುಗಳು ದೊರೆಯುವುದನ್ನು ನಾವು ಗಮನಿಸಿದ್ದೇವೆ. ಈ ಕೃತಿಯನ್ನು ಓದುವಾಗ ನನಗೆ ಒಂದು ನಾಗರಿಕತೆಯ ಉತ್ಖನನದಂತೆಯೇ ಅನಿಸಿತು. ಅದಕ್ಕೆ ಕಾರಣ ತಮ್ಮ ನೆನಪುಗಳನ್ನು ಹೆಕ್ಕುವ ದೊರೈರಾಜ್ ಅವರು ಆತ್ಮಕಥಾನಕದ ಪ್ರಾರಂಭದಲ್ಲಿಯೇ ತಮ್ಮ ಹಟ್ಟಿಯ ಜನರ ಒಂದು ಕಾಲದ ವೃತ್ತಿಯಾಗಿದ್ದ ಇಟ್ಟಿಗೆ ಮತ್ತು ಬಿಲ್ಲೆಗೂಡುಗಳ ಬಗ್ಗೆ ವಿವರವಾಗಿ ಬರೆಯುತ್ತಾರೆ. ಹಾಗಾಗಿ ಈ ಕೃತಿ ಹಲವು ಜನರ ನೆನಪಿನಾಳದಿಂದ ಮೂಡಿಬಂದ ಜೀವಂತ ನಾಗರಿಕತೆಯೇ ಆಗಿದೆ. ●